ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಕಾಲ ಸೇವೆಗಳಲ್ಲಿ ಮ್ಯಾನುಯಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಿ, ಅರ್ಜಿ ಸ್ವೀಕೃತಿಗೆ ಆನ್ ಲೈನ್ ತಂತ್ರಾಂಶದ (ಸೇವಾಸಿಂಧು) ಬಳಕೆಯನ್ನು ಕಡ್ಡಾಯ ಮಾಡುವ ಬಗ್ಗೆ.

ಓದಲಾಗಿದೆ: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಅಧಿಸೂಚನೆ ಸಂಖ್ಯೆ: ಸಿಆಸುಇ 409 ನಾಸೇಖಾ 2018, ದಿನಾಂಕ:02-07-2019.

*********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಅಧಿಸೂಚನೆಯಲ್ಲಿ, ವೈದ್ಯಕೀಯ ಶಿಕ್ಷಣ ಇಲಾಖೆಯ 22 ನಾಗರೀಕ ಸೇವೆಗಳನ್ನು ಕರ್ನಾಟಕ ಸಕಾಲ ಸೇವೆಗಳಡಿಯಲ್ಲಿ ಗುರುತಿಸಲಾಗಿದೆ.

ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:26.12.2018ರಂದು ನಡೆದ ಇಲಾಖೆ ಕಾರ್ಯದರ್ಶಿಗಳ ಸಭೆಯಲ್ಲಿ ಸಕಾಲ ಯೋಜನೆಯ ಅನುಷ್ಠಾನದ ಕುರಿತು ಚರ್ಚಿಸಲಾಯಿತು. ಸಕಾಲ ಯೋಜನೆಯಡಿ ಅಧಿಸೂಚಿಸಲಾಗಿರುವ ಸೇವೆಗಳನ್ನು ಮತ್ತಷ್ಟು ನಾಗರೀಕ ಸ್ನೇಹಿಯನ್ನಾಗಿಸಲು ಮತ್ತು ಸಕಾಲದಡಿ ಅಧಿಸೂಚಿಸಲಾಗಿರುವ ಸೇವೆಗಳಿಗೆ ನಾಗರೀಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶವನ್ನು ಕಲ್ಪಿಸುವ ನಿಟ್ಟಿನಲ್ಲಿ ಇಲಾಖೆಗಳು ಕಾರ್ಯಪ್ರವೃತ್ತರಾಗಬೇಕೆಂದು ಮುಖ್ಯ ಕಾರ್ಯದರ್ಶಿಯವರು ಸೂಚಿಸಿರುತ್ತಾರೆ.

ಸೇವಾ ಸಿಂಧು ಯೋಜನೆಯಡಿ ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವೆಗಳನ್ನು ಗುರುತಿಸಿ, ಅವುಗಳಿಗೆ ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿರುತ್ತದೆ. ಸದರಿ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯ ಮಾಡುವುದರಿಂದ ಸಕಾಲ ಅಧಿನಿಯಮದ ದತ್ತಾಂಶವನ್ನು ಬೈಪಾಸ್ ಮಾಡುವುದನ್ನು ತಡೆಗಟ್ಟಬಹುದು ಎಂದು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಈಗಾಗಲೇ ಅಭಿವೃದ್ಧಿ ಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು ನೀಡಬಹುದಾದ ಸೇವೆಗಳಿಗೆ, ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸುವ ಮತ್ತು ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಎಂಇಡಿ 106 ಆರ್‌ಐ 2020, ಬೆಂಗಳೂರು, ದಿನಾಂಕ: 24-08-2020**

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಸ್ವಾಯತ್ತ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಡಿ ಕರ್ನಾಟಕ ಸಕಾಲ ಸೇವೆಗಳ ಮುಖಾಂತರ ನಾಗರೀಕ ಸೇವೆಗಳನ್ನು, ಈಗಾಗಲೇ ಅಭಿವೃದ್ಧಿ ಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು ನೀಡಬಹುದಾದ ಸೇವೆಗಳಿಗೆ, ಅರ್ಜಿ ಸ್ವೀಕೃತಿಗೆ

Govt. of Karnataka DME Bangalore Board B'lore
14 SEP 2020

ಆನ್‌ಲೈನ್ ತಂತ್ರಾಂಶದ (ಸೇವಾಸಿಂಧು) ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ ಮತ್ತು ಮ್ಯಾನುವಲ್ ಆಗಿ ಅರ್ಜಿ ಸ್ವೀಕರಿಸಿರುವುದನ್ನು ಕೂಡಲೇ ನಿಲ್ಲಿಸಲಾಗಿದೆ.

ಈ ಸಂಬಂಧ ಇ- ಆಡಳಿತ ಇಲಾಖೆಯ ಈ ಕೆಳಕಂಡ ಆನ್‌ಲೈನ್ ಸೇವೆಗಳನ್ನು ಸಾರ್ವಜನಿಕ ಉಪಯೋಗಕ್ಕೆ www.sakala.kar.nic.in ಜಾಲತಾಣದಲ್ಲಿ ಪ್ರಕಟಪಡಿಸಿರುತ್ತದೆ.

| ವೈದ್ಯಕೀಯ ಶಿಕ್ಷಣ ಇಲಾಖೆ | |
|---|---|
| ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ | ನೋಂದಣಿ ಪರಿಶೀಲನೆ |
| | ಗುಡ್ ಸ್ಟಾಂಡಿಂಗ್ ಪ್ರಮಾಣ ಪತ್ರ |
| | ವಿದೇಶದ ಪರಿಶೀಲನಾ ಅರ್ಜಿ |
| | ನಿರಾಕ್ಷೇಪಣೆ ಪ್ರಮಾಣ ಪತ್ರ (ಹೊರ ರಾಜ್ಯ ನೋಂದಣಿ) |
| ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿ | ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಯು ಪರೀಕ್ಷೆ ಬರೆದ ಉತ್ತರ ಪತ್ರಿಕೆಗಳ ಛಾಯಾ ಪ್ರತಿ |
| | ಡಿಪ್ಲೋಮಾ ಪ್ರಮಾಣ ಪತ್ರ |
| | ಕೋರ್ಸ್ ಮುಟ್ಟುಗೋಲು ಹಾಕುವುದು |
| | ವಲಸೆ ಪ್ರಮಾಣ ಪತ್ರ |
| | ನಿರಾಕ್ಷೇಪಣಾ ಪ್ರಮಾಣ ಪತ್ರ |
| | ನೈಜತೆ ಪ್ರಮಾಣ ಪತ್ರ |
| | ಗುಡ್ ಸ್ಟ್ಯಾಂಡಿಂಗ್ ಪ್ರಮಾಣ ಪತ್ರ |
| | ತಾತ್ಕಾಲಿಕ ಪ್ರಮಾಣ ಪತ್ರ |
| ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ | ಮೊದಲನೇ, ಎರಡನೇ ಮತ್ತು ಮೂರನೇ ವರ್ಷದ ಸಾಮಾನ್ಯ ಶುಶ್ರೂಷ ಮತ್ತು ಪ್ರಸೂತಿ ಶಾಸ್ತ್ರ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳು |
| | ತರಬೇತಿ ಅವಧಿ ಮುಗಿಸಿದ ಪ್ರಮಾಣ ಪತ್ರ, ಇಂಟರ್ ಶಿಪ್ ತರಬೇತಿ ಪರೀಕ್ಷೆಯ ಅಂಕಪಟ್ಟಿ ಮತ್ತು ಡಿಪ್ಲೋಮಾ ಪ್ರಮಾಣ ಪತ್ರ |
| | ಮೊದಲನೇ, ಎರಡನೇ, ಮೂರನೇ ವರ್ಷದ ಸಾಮಾನ್ಯ ಶುಶ್ರೂಷ ಮತ್ತು ಪ್ರಸೂತಿ ಶಾಸ್ತ್ರದ ಎಲ್ಲಾ ಅಂಕ ಪಟ್ಟಿಗಳ ಒಂದು ಕ್ರೂಢೀಕೃತ ಅಂಕ ಪಟ್ಟಿ |
| | ದಾಖಲಾತಿಗಳನ್ನು ದೇಶ ವಿದೇಶ ನೇಮಕಾತಿಗಳಿಗೆ ಅಪ್ಪಟವೆಂದು ಪ್ರಮಾಣಿಕರಿಸುವುದು. |
| | ವಲಸೆ ಪ್ರಮಾಣ ಪತ್ರ |
| Rajiv Gandhi University of Health Sciences | Migration Certificate |
| | Initial Expansion Certificate |
| | NOC for Internship Transfer Certificate |
| | NOC for Migration Transfer Certificate |
| | Provisional Degree Certificate |

ಮೇಲೆ ಪಟ್ಟಿ ಮಾಡಿರುವ, ಎಲ್ಲಾ ಸಕಾಲ/ಸೇವಾ. ಸಿಂಧು ಸೇವೆಗಳನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಸ್ವಾಯತ್ತ ಸಂಸ್ಥೆ/ಕಛೇರಿಗಳಲ್ಲಿ ಈ ಕೂಡಲೇ ಜಾರಿಗೆ ಬರುವಂತೆ

ಅನುಷ್ಠಾನಗೊಳಿಸಲು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಈ ಮೂಲಕ ಆದೇಶಿಸಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B.S. Prashant Kumar
24/08/2020

(ಬಿ.ಎಸ್. ಪ್ರಶಾಂತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ವೈದ್ಯಕೀಯ ಶಿಕ್ಷಣ ಇಲಾಖೆ

ಇವರಿಗೆ:

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
2. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.
3. ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್, ಬೆಂಗಳೂರು
4. ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿ, ಬೆಂಗಳೂರು
5. ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ, ಬೆಂಗಳೂರು
6. ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್, ಬಹುಮಹಡಿ ಕಟ್ಟಡ ಬೆಂಗಳೂರು-01
7. ಶಾಖಾರಕ್ಷಾಕಡತ / ಹೆಚ್ಚುವರಿಪ್ರತಿಗಳು.

**<u>ಪ್ರತಿ:</u>**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಆಸುಇ(ಇ-ಆಡಳಿತ) ಬಹುಮಹಡಿಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ,ಬಹುಮಹಡಿ ಕಟ್ಟಡ, ಬೆಂಗಳೂರು
4. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು